# ಕರ್ನಾಟಕ ವಿಧಾನ ಪರಿಷತ್ತು

ನಿಯಮ-72ರಡಿ ಸದಸ್ಯರಾದ ಶ್ರೀ ಐವಾನ್ ಡಿ'ಸೋಜಾ, ಶ್ರೀ ಜಗದೇವ್ ಗುತ್ತೇದಾರ್, ಶ್ರೀ ಮಂಜುನಾಥ್ ಭಂಡಾರಿ, ಶ್ರೀ ಎಂ. ನಾಗರಾಜು, ಡಾ. ಡಿ. ತಿಮ್ಮಯ್ಯ ಹಾಗೂ ಶ್ರೀ ಬಸವನಗೌಡ ಬಾದರ್ಲಿ ರವರು ಮಾನ್ಯ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರ ಗಮನ ಸೆಳೆಯುವುದು.

ಪ್ರಶ್ನೆ:-

ಸಾರ್ವಜನಿಕ ವಿತರಣಾ ಪದ್ಧತಿಯಡಿ ಫಲಾನುಭವಿಗಳಿಗೆ ನೀಡಲಾಗುತ್ತಿರುವ ನೇರ ನಗದು ವರ್ಗಾವಣೆ (DBT) ಮೊತ್ತ ರೂ 170/- ಅನ್ನು ಪಡಿತರ ಫಲಾನುಭವಿಗಳ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತಿರುವುದಕ್ಕೆ ಬದಲಾಗಿ ಅರ್ಧ ಕೆ.ಜಿ ತೊಗರಿಬೇಳೆ/ ಇತರ ಬೇಳೆ, ಅರ್ಧ ಕೆ.ಜಿ ಸೂರ್ಯಕಾಂತಿ ಅಡುಗೆ ಎಣ್ಣೆ ಮತ್ತು ಅರ್ಧ ಕ.ಜಿ ಸಕ್ಕರೆಯನ್ನೊಳಗೊಂಡ ಆಹಾರ (Food Kit) ವಿತರಿಸುವುದರಿಂದ ಜನರ ಪೌಷ್ಟಿಕಾಂಶ ವೃದ್ಧಿಯಾಗಿ ಅವರ ಜೀವನಮಟ್ಟ ಸುಧಾರಣೆಯಾಗುವ ವಿಷಯ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಉತ್ತರ:-

1. ರಾಜ್ಯ ಸರ್ಕಾರದಿಂದ 2023ರ ಜುಲೈ ಮಾಹೆಯಿಂದ ಅನ್ವಯಿಸುವಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಮೂಲಕ ಅನ್ನಭಾಗ್ಯ ಯೋಜನೆಯಡಿ ಪ್ರತಿ ಫಲಾನುಭವಿಗೆ 10 ಕೆಜಿ ಅಕ್ಕಿಯನ್ನು ವಿತರಿಸುವುದಾಗಿ ಘೋಷಿಸಲಾಗಿರುತ್ತದೆ. ಅನ್ನಭಾಗ್ಯ ಯೋಜನೆಯಡಿಯಲ್ಲಿ ಇತರೆ ಆಹಾರ ಧಾನ್ಯಗಳಾದ ಬೇಳೆಕಾಳು, ಎಣ್ಣೆ ಹಾಗೂ ಅಗತ್ಯ ಪದಾರ್ಥಗಳನ್ನು ಸೇರಿಸಬಹುದಾಗಿರುತ್ತದೆ. ಕೇಂದ್ರ ಸರ್ಕಾರವು (GoI) ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (NFSA) ಅಡಿಯಲ್ಲಿ ಕೇಂದ್ರ ವ್ಯಾಪ್ತಿಯ ಅಂತ್ಯೋದಯ ಪಡಿತರ ಚೀಟಿಗೆ 35 ಕೆಜಿ ಮತ್ತು ಪ್ರತಿ ಆದ್ಯತಾ ಫಲಾನುಭವಿಗೆ 5 ಕೆಜಿ ಆಹಾರ ಧಾನ್ಯಗಳನ್ನು ಒದಗಿಸುತ್ತಿದೆ. ಪ್ರಸ್ತುತ ಕೇಂದ್ರಸರ್ಕಾರದ NFSA ಅಡಿಯಲ್ಲಿ ಕೇಂದ್ರ ವ್ಯಾಪ್ತಿಯ ಎಎವೈ ಮತ್ತು ಪಿಎಚ್‌ಎಚ್ ಒಟ್ಟು 4,01,93,130 ಫಲಾನುಭವಿಗಳಿಗೆ ಮಾತ್ರ ಆಹಾರ ಧಾನ್ಯಗಳನ್ನು ಹಂಚಿಕೆ ನೀಡುತ್ತಿದ್ದು, ಹೆಚ್ಚುವರಿ ರಾಜ್ಯ ವ್ಯಾಪ್ತಿಯ ಪಿಎಚ್‌ಎಚ್ ಒಟ್ಟು 34,67,527 ಫಲಾನುಭವಿಗಳಿಗೆ ರಾಜ್ಯ ಸರ್ಕಾರವು ಪ್ರತಿ ಫಲಾನುಭವಿಗೆ 5 ಕೆಜಿ ಆಹಾರ ಧಾನ್ಯಗಳನ್ನು ಸ್ವಂತ ವೆಚ್ಚದಲ್ಲಿ ಉಚಿತವಾಗಿ ಒದಗಿಸುತ್ತಿದೆ.

2. ಇದರೊಂದಿಗೆ ಎಎವೈ ಮತ್ತು ಪಿಎಚ್‌ಎಚ್ ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಹೆಚ್ಚುವರಿ 5 ಕೆಜಿ ಅಕ್ಕಿ ವಿತರಿಸಬೇಕಾಗಿದ್ದು, ಕೇಂದ್ರ ಸರ್ಕಾರವು ರಾಜ್ಯಗಳಿಗೆ ಜುಲೈ-2023ರ ಮಾಹೆಯಿಂದ ಎಫ್‌ಸಿಐ ನಿಂದ ಓಎಂಎಸ್‌ಎಸ್(ಡಿ) ಅಡಿಯಲ್ಲಿ ಅಕ್ಕಿ ಖರೀದಿಯನ್ನು ನಿರಾಕರಿಸಿದ್ದರಿಂದ ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿಯ ಬೇಡಿಕೆ ಪ್ರಮಾಣ ಸುಮಾರು 2.18